**ಓ ಎಸ್ ನಂಃ 298/2016**
**ಪಿ ಡಬ್ಲ್ಯು ಃ 3**

**ದಿಃ 24.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಸಿ ಎನ್ ಆರ್ ವಕೀಲರಿಂದಃ-**

ನಿಪಿ 88 ರಲ್ಲಿ ತಮ್ಮ ಸಹಿ ಸೋಮಶೇಖರ ಎಂದು ನಮೂದಾಗಿದೆ ಎಂದರೆ ಸಾಕ್ಷಿ ನನ್ನ ಹೆಸರು ಸೋಮಶೇಖರಯ್ಯ ಎಂದು ನುಡಿಯುತ್ತಾರೆ. ನನ್ನ ಹೆಸರು ಸೋಮಶೇಖರ ಅಲ್ಲ. ನಿಪಿ 88 ರ ಮರಣ ಶಾಸನ ಪತ್ರವನ್ನು ತಯಾರು ಮಾಡಲು ತಾವು ಯಾವ ಯಾವ ದಾಖಲಾತಿಗಳನ್ನು ನೋಡಿದ್ದೀರಿ ಎಂದರೆ ಸಾಕ್ಷಿ ಕ್ರಯ ಪತ್ರವನ್ನು ನೋಡಿರುತ್ತೇನೆ. ಸದರಿ ಕ್ರಯ ಪತ್ರವು ಮೂಲ ಕ್ರಯ ಪತ್ರ ಆಗಿರುತ್ತದೆ. ನಿಪಿ 3 ರ ಕ್ರಯ ಪತ್ರದಲ್ಲಿ ವಿಸ್ತೀರ್ಣ ಎಷ್ಟು ಇದೆ ಎಂದರೆ ಸಾಕ್ಷಿಯು 3 ಎಕರೆ. ನಿಪಿ 3 ರ ಪ್ರಕಾರ ಚನ್ನಪ್ಪನವರ ಹೆಸರಿನಲ್ಲಿ 3 ಎಕರೆ ಮಾತ್ರ ಜಮೀನು ಇದೆ. ನಿಪಿ 88 ರ ಮರಣ ಶಾಸನ ಪತ್ರದ ಷೆಡ್ಯೂಲ್ ನಲ್ಲಿ ವಿಸ್ತೀರ್ಣ 3 ಎಕರೆ 31 ಗುಂಟೆ ಎಂದು ನಮೂದಾಗಿದೆ. ಚನ್ನಪ್ಪನವರ ಹೆಸರಿನಲ್ಲಿ 3 ಎಕರೆ ಮಾತ್ರ ದಾಖಲಾತಿ ಇದ್ದು 3 ಎಕರೆ 31 ಗುಂಟೆಗೆ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ. ನಿಪಿ 88 ರ ಮರಣ ಶಾಸನ ಪತ್ರವನ್ನು ತಯಾರು ಮಾಡಲು ಚನ್ನಪ್ಪನವರು ಛಾಪಾ ಕಾಗದವನ್ನು ತಂದಿರುತ್ತಾರೆ. ಚನ್ನಪ್ಪನವರಿಗೆ ಎಷ್ಟು ರೂಪಾಯಿನ ಛಾಪಾ ಕಾಗದ ತರಬೇಕೆಂದು ತಾವು ತಿಳಿಸಿದ್ದೀರಿ ಎಂದರೆ ಸಾಕ್ಷಿಯು ನಾನು ಇಷ್ಟೆ ರೂಪಾಯಿನ ಛಾಪಾ ಕಾಗದ ತರಬೇಕೆಂದು ಹೇಳಿರುವುದಿಲ್ಲ. ಚನ್ನಪ್ಪನವರು ನನಗೆ ನಮ್ಮ ತಂದೆಯ ಕಾಲದಿಂದಲೂ ಗೊತ್ತು. ಸದರಿಯವರು ನಮ್ಮ ಪಕ್ಕದ ಗ್ರಾಮದ ವಾಸಿ. ಚನ್ನಪ್ಪನವರು ತಮಗೆ ಹೇಗೆ ಪರಿಚಯ ಇದೆ ಎಂದರೆ ಸಾಕ್ಷಿಯು ಅವರು ನನಗೆ ಗೊತ್ತು. ಚನ್ನಪ್ಪನವರಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ನಾನು ವಕಾಲತ್ತು ವಹಿಸಿರುವುದಿಲ್ಲ. ನಿ ಪಿ 59 ರ ದಾಖಲಾತಿಯಲ್ಲಿ ನಮೂದು ಮಾಡಿರುವ ಚನ್ನಪ್ಪ ಮತ್ತು ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ಚನ್ನಪ್ಪನವರು ಒಬ್ಬರ ಅಥವಾ ಬೇರೆ ಬೇರೆ ಎಂದರೆ ಸಾಕ್ಷಿಯು ಒಬ್ಬರೆ ಎಂದು ನುಡಿಯುತ್ತಾರೆ. ನಿಪಿ 88 ರ ಮರಣ ಶಾಸನ ಪತ್ರ 2 ನೇ ಕಂಡಿಕೆಯಲ್ಲಿ ಅವರಿಗೆ 77 ವರ್ಷ ವಯಸ್ಸಾಗಿದ್ದು ಅವರಿಗೆ ದೇಹದ ಸ್ಥಿತಿ ಚೆನ್ನಾಗಿರುವುದಿಲ್ಲ ಮತ್ತು ಪದೇ ಪದೇ ಅನಾರೋಗ್ಯದಿಂದ ಬಳಲುತ್ತಿದ್ದು ಎಂಬುದಾಗಿ ಒಕ್ಕಣೆ ಇದೆ ನಿಪಿ 88 ರ ಮರಣ ಶಾಸನ ಪತ್ರ ಬರೆಯುವ ದಿನದಂದು ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ವೈದ್ಯಕೀಯ ಪ್ರಮಾಣ ಪತ್ರ ಪಡೆದುಕೊಂಡಿದ್ದೀರ ಎಂದರೆ ಸಾಕ್ಷಿಯು ಇಲ್ಲ ಮತ್ತು ಕೊಟ್ಟಿರುವುದಿಲ್ಲ

ಎಂದು ನುಡಿಯುತ್ತಾರೆ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ತಮ್ಮ ಸಹಿಗೂ ಹಾಗೂ ನಿಪಿ 88 (ಬಿ) ರ ಸಹಿ ವ್ಯತ್ಯಾಸದಿಂದ ಕೂಡಿದೆ ಎಂದರೆ ಸರಿಯಲ್ಲ. ನಿಪಿ 88 ರ ಮರಣ ಶಾಸನ ಪತ್ರ ತಯಾರು ಮಾಡಲು ಛಾಪಾಕಾಗದವನ್ನು ಖರೀದಿ ಮಾಡಲು ದಿನಾಂಕ 27 ತಿಂಗಳು 7 ಎಂದು ನಮೂದಾಗಿದೆ ಎಂದರೆ ಸರಿ. ಸದರಿ ಛಾಪಾಕಾಗದವನ್ನು ಖರೀದಿ ಮಾಡಿದ ವರ್ಷವನ್ನು ನಿಪಿ 88 ರ ದಾಖಲಾತಿಯಲ್ಲಿ ಇಲ್ಲ ಎಂದರೆ ಸಾಕ್ಷಿ ಜಿಲ್ಲಾ ಖಜಾನೆಯಿಂದ 1987 ನೇ ಸಾಲಿನಲ್ಲಿ ಖರೀದಿ ಮಾಡಿದ್ದು ಸದರಿ ವಿಚಾರವಾಗಿ ಜಿಲ್ಲಾ ಖಜಾನೆಯ ಮೊಹರು ಇದೆ ಎಂದು ನುಡಿಯುತ್ತಾರೆ. ನಿಪಿ 88 ರ ದಾಖಲಾತಿಯ ಮೊಹರಿನಲ್ಲಿ ಅಕ್ಷರಗಳು ಇಲ್ಲ ಎಂದರೆ ಸಾಕ್ಷಿಯು ಸರಿಯಾಗಿ ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ 88 ರ 2 ನೇ ಪುಟದಲ್ಲಿ ಸದರಿ ಛಾಪಾಕಾಗದವನ್ನು ಖರೀದಿ ಮಾಡಿದ ದಿನಾಂಕ, ನಂಬರ್ ಮತ್ತು ಸಹಿ ಬೇರೆ ಶಾಯಿಯಲ್ಲಿದ್ದು ಮತ್ತು ಖರೀದಿದಾರರ ಹೆಸರು ಬೇರೆ ಶಾಯಿ ಮತ್ತು ಬೇರೆ ಬರವಣಿಗೆಯಲ್ಲಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ. ಚನ್ನಪ್ಪನವರು ನಿಪಿ 88 ರ ಮರಣ ಶಾಸನ ಪತ್ರವನ್ನು ತಯಾರು ಮಾಡಬೇಕೆಂದು ತಮ್ಮ ಬಳಿ ಬಂದಾಗ ತಾವು ಅವರ ಗುರುತಿನ ಚೀಟಿಯನ್ನು ಪಡೆದುಕೊಂಡಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿ 88 ರ ಮರಣ ಶಾಸನ ಪತ್ರದಲ್ಲಿ ಪ್ರತಿ ಪುಟದಲ್ಲಿ ಇರುವ ಚನ್ನಪ್ಪನವರ ಸಹಿಗಳು ಸ್ಪಷ್ಟವಾಗಿ ಕಾಣುತ್ತಿದ್ದು ಪ್ರತಿಯೊಂದು ಪುಟದಲ್ಲಿರುವ ಸಹಿಗಳು ವ್ಯತ್ಯಾಸದಿಂದ ಕೂಡಿದೆ ಎಂದರೆ ಸರಿಯಲ್ಲ. ನಿಪಿ 88 ರ ಮರಣ ಶಾಸನ ಪತ್ರದ 3 ನೇ ಪುಟದಲ್ಲಿ ಕಾಣಿಸುತ್ತಿರುವ ಚನ್ನಪ್ಪನವರ ಸಹಿ ಉದ್ದವಾಗಿದ್ದು ಸದರಿ ದಾಖಲೆಯ 1 ಮತ್ತು 2 ನೇ ಪುಟದಲ್ಲಿರುವ ಚನ್ನಪ್ಪನವರ ಸಹಿ ಚಿಕ್ಕದಾಗಿದೆ ಎಂದರೆ ಸರಿ. ಚನ್ನಪ್ಪನವರ ವಾರಸುದಾರರ ಬಗ್ಗೆ ನನಗೆ ಗೊತ್ತಿಲ್ಲ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದ 3 ನೇ ಕಂಡಿಕೆಯಲ್ಲಿ ಈರಕೆಂಪಯ್ಯನವರು ಸ್ವಾಧೀನದಲ್ಲಿದ್ದು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂಬುದಾಗಿ ಒಕ್ಕಣೆ ಇದೆ ಎಂದರೆ ಸಾಕ್ಷಿಯು ಮರಣ ಶಾಸನ ಪತ್ರ ತಯಾರು ಮಾಡುವ ದಿನಾಂಕದಂದು ಚನ್ನಪ್ಪನವರು ನನಗೆ ತಿಳಿಸಿರುತ್ತಾರೆ ಆದ ಕಾರಣ ಸದರಿ ವಿಚಾರವನ್ನು ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತೇನೆ. ನಿಪಿ 88 ರ ಮರಣ ಶಾಸನ ಪತ್ರದಲ್ಲಿ ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಈರಕೆಂಪಯ್ಯನವರು ಸ್ವಾಧೀನಾನುಭವದಲ್ಲಿದ್ದಾರೆ ಎಂಬುದಾಗಿ ಬರೆಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಓ ಎಸ್ ನಂಃ 298/2016

ಪಿ ಡಬ್ಲ್ಯೂ ಃ 3

ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಒಕ್ಕಣೆಯನ್ನು ನಿಪಿ 88 ರ ಮರಣ ಶಾಸನ ಪತ್ರದ ಆಧಾರದ ಮೇರೆಗೆ ಬರೆಸಿರುತ್ತೇನೆ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಹಾಗೇ ಈರಕೆಂಪಯ್ಯನವರು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ 88 ರ ದಾಖಲಾತಿಯಲ್ಲಿರುವ ಸಹಿಗಳು ಹೊಸದಾಗಿ ಕಾಣಿಸುತ್ತಿವೆ ಎಂದರೆ ಸರಿಯಲ್ಲ. ತಾವು ಸಾಮಾನ್ಯವಾಗಿ ವಿಲ್ ನ್ನು ತಯಾರು ಮಾಡಬೇಕಾದರೆ ತಮ್ಮ ಕಛೇರಿಯಲ್ಲಿ ಲೆಡ್ಜರ್ ಪುಸ್ತಕವನ್ನು ಇಟ್ಟುಕೊಂಡಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿ 88ರ ಮರಣ ಶಾಸನ ಪತ್ರದ ಮೂಲ ಪ್ರತಿಯನ್ನು ಚನ್ನಪ್ಪನವರೇ ತೆಗೆದುಕೊಂಡು ಹೋಗಿರುತ್ತಾರೆ. ಸದರಿ ವಿಚಾರವನ್ನು ತಾವೇನಾದರೂ ಈರಕೆಂಪಯ್ಯನವರಿಗೆ ತಿಳಿಸಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಚನ್ನಪ್ಪನವರ ಸಹಿಗೆ ಸಂಬಂಧಿಸಿದ ಬೇರೆ ದಾಖಲಾತಿಗಳನ್ನು ತಾವು ನೋಡಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯತ್ತಾರೆ. ನಿಪಿ 88 ರ ದಾಖಲಾತಿಯಲ್ಲಿರುವ ಚನ್ನಪ್ಪನವರ ರುಜು ಎಂದು ಹಾಕಿರುವ ಸಹಿಯು ಚನ್ನಪ್ಪನವರದ್ದಲ್ಲ ಎಂದರೆ ಸರಿಯಲ್ಲ. ನಿಪಿ 88 ರ ಮರಣ ಶಾಸನ ಪತ್ರದ ಷೆಡ್ಯೂಲ್ ನಲ್ಲಿರುವ ಚಕ್ಕುಬಂದಿಗೂ ಮತ್ತು ಕ್ರಯ ಪತ್ರದ ಷೆಡ್ಯೂಲ್ ನಲ್ಲಿರುವ ಸ್ವತ್ತಿನ ಚಕ್ಕುಬಂದಿಗೂ ತುಂಬಾ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಮರಣ ಶಾಸನ ಪತ್ರ ಬರೆಯುವ ದಿನಾಂಕದಂದು ಅವರು ಹೇಳಿದ ಹಾಗೆ ಚಕ್ಕುಬಂದಿಯನ್ನು ನಿಪಿ 88 ರ ಮರಣ ಶಾಸನ ಪತ್ರದಲ್ಲಿ ನಮೂದು ಮಾಡಿರುತ್ತೇನೆ. ಸದರಿ ವಿಚಾರವನ್ನು ತಾವೇನಾದರೂ ಪರಿಶೀಲನೆ ಮಾಡಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿ 88 ರ ಮರಣ ಶಾಸನ ಪತ್ರದ ಸಾಕ್ಷಿ ರುಜು / ಸಹಿಗಳ ಕೆಳಗೆ ಬರೆದಿರುವ ಬರವಣಿಗೆ ನನ್ನದು. ಸದರಿ ದಾಖಲಾತಿಯಲ್ಲಿ ನಮೂದಾಗಿರುವ ಚನ್ನಪ್ಪನವರ ಹೆಸರು ಮತ್ತು ಸಾಕ್ಷಿ 2 ಎಲ್ ಟಿ ಎಂ ಕೆಳಗೆ ಬರೆದಿರುವ ಬರವಣಿಗೆಯು ಒಂದೆ ಎಂದರೆ ಸರಿಯಲ್ಲ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದ 7 ನೇ ಕಂಡಿಕೆಯಲ್ಲಿ ಪುಟ 1 ರಿಂದ 3 ರಲ್ಲಿ ಬೆರಳಚ್ಚು ಆದ ಮೇಲೆ ಮರಣ ಶಾಸನ ಕರ್ತರಾದ ಚನ್ನಪ್ಪನವರು ಅದನ್ನು ಸಾಕ್ಷಿಗಳ ಸಮ್ಮುಖದಲ್ಲಿ ನನ್ನಿಂದ ಓದಿಸಿ ಕೇಳಿ ಸರಿಯಾಗಿರುವುದಾಗಿ ಒಪ್ಪಿಕೊಂಡು ಅವರ ಮರಣ ಶಾಸನದ ಪುಟ 1 ರಿಂದ 3 ರಲ್ಲಿ ಕನ್ನಡ ಭಾಷೆಯಲ್ಲಿ ಇಬ್ಬರು ಸಾಕ್ಷಿಗಳ ಮತ್ತು ನನ್ನ ಸಮಕ್ಷಮದಲ್ಲಿ ಅವರು ಸಹಿ ಹಾಕಿದ್ದಾರೆ ಎಂದು ಹೇಳಿ ಬರೆಸಿದ್ದೀರಿ ಎಂದರೆ ಸರಿ. ತಮ್ಮ ಮುಂದೆ

**ಓ ಎಸ್ ನಂಃ 298/2016**

**ಪಿ ಡಬ್ಲ್ಯೂ ಃ 3**

ಸಹಿ ಹಾಕಿದ್ದಾರೆ ಎಂಬುದಾಗಿ ನಿಪಿ 88 ರ ಮರಣ ಶಾಸನ ಪತ್ರದಲ್ಲಿ ಉಲ್ಲೇಖ ಇಲ್ಲ ಎಂದರೆ ಸಾಕ್ಷಿಯು ಅದರಲ್ಲಿ ಇಲ್ಲ ನನ್ನ ಮುಂದೆ ಹೇಳುವ ಅವಶ್ಯಕತೆ ಸಹ ಇಲ್ಲ ಎಂದು ನುಡಿಯುತ್ತಾರೆ. ನಿಪಿ 88 ರ ಮರಣ ಶಾಸನ ಪತ್ರದಲ್ಲಿ ನಮೂದು ಮಾಡಿರುವ ಸಾಕ್ಷಿಗಳು ನನಗೆ ಗೊತ್ತಿರುವುದಿಲ್ಲ. ನಿಪಿ 88 ರ ಮರಣ ಶಾಸನ ಪತ್ರದ ಒಕ್ಕಣೆಯನ್ನು ತಾವು ತಯಾರು ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ತಯಾರು ಮಾಡಿರುವ ಮರಣ ಶಾಸನ ಪತ್ರಕ್ಕೆ ಅನುಗುಣವಾಗಿ ತಾವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ 88 ರ ಮರಣ ಶಾಸನ ಪತ್ರದ ಛಾಪಾ ಕಾಗದವನ್ನು ಸಹ ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದ 5 ನೇ ಕಂಡಿಕೆಯಲ್ಲಿ ನಮೂದು ಮಾಡಿರುವ ಚನ್ನಪ್ಪನವರು ಮರಣ ಶಾಸನ ಪತ್ರವನ್ನು ತಯಾರು ಮಾಡಿಕೊಡಬೇಕೆಂದು ಕೇಳಿಕೊಂಡು ತಮ್ಮ ಬಳಿ ಯಾವತ್ತೂ ಸಹ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 88 ರ ದಾಖಲಾತಿಗೆ ಸಾಕ್ಷಿದಾರರಾಗಲಿ ಅಥವಾ ಚನ್ನಪ್ಪನವರಾಗಲಿ ತಮ್ಮ ಮುಂದೆ ಸ ಹಿಗಳನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**